## ನಿಮ್ಮೊಡನೆ

# ಎಳೆಯ ಮನಸ್ಸುಗಳಿಗೆ ನಿಧಾನವಿಷ ಪೂರೈಕೆ ಸ್ವಯಂ ನಿಯಂತ್ರಣದ ನೈತಿಕತೆಯೇ ಅಂಕುಶ

**ಆನ್‌ಲೈನ್ ಜಗತ್ತಿನ ಅಶ್ಲೀಲತೆ ಹಾಗೂ ಹಿಂಸೆಯನ್ನು ಒಳಗೊಂಡಿರುವ ವಿಡಿಯೊಗಳು ಮಾತ್ರವಲ್ಲ; ಕಿರುತೆರೆಯ ಅನೇಕ ಕಾರ್ಯಕ್ರಮಗಳೂ ಮಕ್ಕಳ ಮನಸ್ಸನ್ನು ಹಾನಿಗೊಳಿಸುವ ರೂಪದಲ್ಲಿವೆ. ನಿಧಾನವಿಷದಂತೆ ಪರಿಣಮಿಸುವ ಇಂಥ ಪ್ರಯತ್ನಗಳು ನಿಧಾನವಾಗಿ ಸಮಾಜದ ಸ್ವೀಕೃತಿಯನ್ನೂ ಪಡೆಯುತ್ತಿರುವುದು ಕಳವಳಕಾರಿ.**



ಈಶ್ವರ್

ಸಾಮಾಜಿಕ ಜಾಲತಾಣಗಳು ಹಾಗೂ ಒಟಿಟಿ ವೇದಿಕೆಗಳಲ್ಲಿ ಎಳೆಯರ ಮನಸ್ಸನ್ನು ಗಾಸಿ ಮಾಡಬಲ್ಲ ಅಶ್ಲೀಲ ವಿಡಿಯೊಗಳು ಪ್ರಸಾರವಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಮಕ್ಕಳ ಬಗ್ಗೆ ಕಾಳಜಿಯುಳ್ಳ ಎಲ್ಲರ ಮನಸ್ಸಿನ ಆತಂಕವನ್ನು ಅಭಿವ್ಯಕ್ತಿಸಿದೆ. ಅಶ್ಲೀಲ ವಿಡಿಯೊಗಳನ್ನು ನಿಯಂತ್ರಿಸುವ ವಿಚಾರದ ಬಗ್ಗೆ ಶಾಸಕಾಂಗ ಹಾಗೂ ಕಾರ್ಯಾಂಗ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ಅಶ್ಲೀಲ ಚಿತ್ರಗಳನ್ನು ನಿಷೇಧಿಸುವಂತೆ ಕೋರಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯ ವ್ಯಕ್ತಪಡಿಸಿರುವ ಅಭಿಪ್ರಾಯದ ಬಗ್ಗೆ ಸರ್ಕಾರ ಹಾಗೂ ಸಮಾಜ ಗಂಭೀರವಾಗಿ ಚಿಂತಿಸುವುದು ಅಗತ್ಯ. ಅಶ್ಲೀಲತೆ ಹಾಗೂ ಹಿಂಸೆಯನ್ನು ಒಳಗೊಂಡ ವಿಡಿಯೊಗಳು ಮಕ್ಕಳ ಮನಸ್ಸನ್ನು ಗಾಸಿಗೊಳಿಸುವ ಅಪಾಯ ಸ್ಪಷ್ಟವಾಗಿದೆ. ಅಶ್ಲೀಲತೆಯ ಚೌಕಟ್ಟನ್ನು ದಾಟಿ ವಿಕೃತಿಯನ್ನು ಬಿಂಬಿಸುವ ದೃಶ್ಯಗಳು ಎಳೆಯ ಮನಸ್ಸುಗಳು ಸಮಾಜದ ಬಗ್ಗೆ ನಕಾರಾತ್ಮಕ ಧೋರಣೆಯನ್ನು ಬೆಳೆಸಿಕೊಳ್ಳಲು ಕಾರಣವಾಗಬಹುದು. ಇದರ ಜೊತೆಗೆ, ಆನ್‌ಲೈನ್ ಚಕ್ರವ್ಯೂಹದಲ್ಲಿ ಸಿಲುಕುವ ಚಿಣ್ಣರು ಲೈಂಗಿಕವಾಗಿ ಹಾಗೂ ಮಾನಸಿಕವಾಗಿ ದೌರ್ಜನ್ಯಕ್ಕೊಳಗಾಗುವ ಸಾಧ್ಯತೆಗಳೂ ಇವೆ. ಇಂಥ ಅನುಭವಗಳಿಂದ ಖಿನ್ನತೆಗೊಳಗಾಗಿ, ಜೀವನದ ಬಗ್ಗೆ ಆಸಕ್ತಿಯನ್ನೇ ಕಳೆದುಕೊಂಡಿರುವ ಇಲ್ಲವೇ ಸಾಮಾಜಿಕ ಸ್ವಾಸ್ಥ್ಯ ಕದಡುವ ಮನಸ್ಥಿತಿ ರೂಪಿಸಿಕೊಳ್ಳುವ ಮಕ್ಕಳ ಉದಾಹರಣೆಗಳು ಸಾಕಷ್ಟಿವೆ.

ಅನುಭವ ಹಾಗೂ ವಿವೇಕವನ್ನು ಹೊಂದಿರುವ ಹಿರಿಯರೇ ಸೈಬರ್ ವಂಚನೆಗೆ ಒಳಗಾಗುತ್ತಿರುವ ದಿನಗಳಲ್ಲಿ, ಜಗತ್ತಿನ ಬಗ್ಗೆ ಸ್ಪಷ್ಟ ತಿಳಿವಳಿಕೆಯೇ ಇಲ್ಲದ ಮಕ್ಕಳು ಸೈಬರ್ ಖೆಡ್ಡಾಕ್ಕೆ ಮಿಕಗಳಾಗುವುದರಲ್ಲಿ ಅಚ್ಚರಿಯಿಲ್ಲ. ಅಧ್ಯಯನವೊಂದರ ಪ್ರಕಾರ, ಶೇ. 60ಕ್ಕೂ ಹೆಚ್ಚು ಹದಿಹರೆಯದವರು ಆನ್‌ಲೈನ್‌ನಲ್ಲಿ ಹಾನಿಕಾರಕ ವಿಷಯಗಳಿಗೆ ಮುಖಾಮುಖಿ ಆಗಿರುತ್ತಾರೆ. ಇವರಲ್ಲಿ ಕೆಲವರಾದರೂ ಮಕ್ಕಳು ದುರ್ಬಲ ಗಳಿಗೆಗಳಲ್ಲಿ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಧ್ಯತೆಯಿದೆ.

‘ಹದಿನೆಂಟು ವರ್ಷ ತುಂಬಿದ ವಯಸ್ಕರು ಮಾತ್ರ ನೋಡಬೇಕು’ ಎನ್ನುವ ನಿಯಮದ ಹೊರತು, ಯಾವುದೇ ಸೆನ್ಸಾರ್ ಅಂಕುಶವಿಲ್ಲದ ಅಶ್ಲೀಲ ವಿಡಿಯೊಗಳು ಆನ್‌ಲೈನ್ ವೇದಿಕೆಯನ್ನು ತುಂಬಿಕೊಂಡಿವೆ. ‘ಹದಿನೆಂಟು ವರ್ಷ’ ಎನ್ನುವ ನಿಯಮ ಕಡ್ಡಾಯ ಪಾಲನೆಯಾಗುವ ವ್ಯವಸ್ಥೆಯೂ ಆನ್‌ಲೈನ್ ವೇದಿಕೆಗಳಲ್ಲಿಲ್ಲ. ಹಾಗೆ ನೋಡಿದರೆ, ನಿಷೇಧ ಅಥವಾ ಕಡ್ಡಾಯ ನಿಯಮ ಪಾಲನೆ ಎನ್ನುವುದಕ್ಕೆ ಆನ್‌ಲೈನ್ ಜಗತ್ತಿನಲ್ಲಿ ಹೆಚ್ಚಿನ ಅರ್ಥವಿಲ್ಲ. ಜಗತ್ತನ್ನು ಬೆರಳ ತುದಿಗೆ ತಂದಿರುವ ವೇದಿಕೆಯಲ್ಲಿ ಏನನ್ನಾದರೂ ಮುಚ್ಚಿಡಬಹುದು ಅಥವಾ ನಿಯಂತ್ರಿಸಬಹುದೆನ್ನುವುದನ್ನು ನಿರೀಕ್ಷಿಸಲಾಗದು. ಎಲ್ಲೆಗಳೇ ಇಲ್ಲದ ಅನಂತ ಬಯಲಿನಂತಿರುವ ಹಾಗೂ ಕಳ್ಳದಾರಿಗಳಿರುವ ಆನ್‌ಲೈನ್ ವೇದಿಕೆಯಲ್ಲಿ ನಿಯಂತ್ರಣಗಳನ್ನು ಸಾಧಿಸುವುದು, ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಮಾಡುವುದು ಪ್ರಾಯೋಗಿಕವಾಗಿ ಕಷ್ಟ. ಮಕ್ಕಳನ್ನು ವಯಸ್ಕರ ವಿಡಿಯೊಗಳಿಂದ ದೂರವಿಡುವ ದಾರಿಗಳನ್ನು ಪೋಷಕರೇ ಹುಡುಕಿಕೊಳ್ಳುವುದು ಹೆಚ್ಚು ಪರಿಣಾಮಕಾರಿಯಾದ ದಾರಿ.

ಮಕ್ಕಳು ಆನ್‌ಲೈನ್‌ನಲ್ಲಿ ಇಂಥದ್ದನ್ನು ನೋಡಬೇಕು, ಇಂಥದ್ದನ್ನು ನೋಡಬಾರದು ಎಂದು ಪೋಷಕರು ನಿರ್ಧರಿಸಲು ಹಾಗೂ ನಿಗಾವಹಿಸಲು ಒಂದು ಹಂತದವರೆಗಿನ ಅವಕಾಶವನ್ನು ತಂತ್ರಜ್ಞಾನ ಕಲ್ಪಿಸಿದೆ. ಯಾವುದೋ ಅನಿವಾರ್ಯತೆಯಿಂದ ಆನ್‌ಲೈನ್ ಲೋಕ ಪ್ರವೇಶಿಸಲು ನಮ್ಮ ಮಕ್ಕಳಿಗೆ ಅವಕಾಶ ಕಲ್ಪಿಸಿದ್ದೇವೆ. ಶಿಕ್ಷಣದ ಹೆಸರಿನಲ್ಲೋ ಸವಲತ್ತಿನ ನೆಪದಲ್ಲೋ ಮೊಬೈಲ್ ಫೋನನ್ನು ಮಕ್ಕಳ ಕೈಗೆ ಕೊಟ್ಟ ಕ್ಷಣವೇ, ವಯಸ್ಕರ ಲೋಕದ ಕೀಲಿಕೈಯನ್ನು ಅವರಿಗೆ ಕೊಟ್ಟಂತಾಗಿದೆ ಎನ್ನುವುದನ್ನು ನಾವು ಮರೆಯಬಾರದು. ಮೊಬೈಲ್ ಫೋನ್, ಇಂಟರ್ನೆಟ್ ಬಳಕೆಯಲ್ಲಿ ಪೋಷಕರಿಗಿಂತ ಮಕ್ಕಳೇ ಹೆಚ್ಚು ಚುರುಕಾಗಿರುವುದರಿಂದ ಮಕ್ಕಳ ಮೇಲೆ ನಿಗಾ ಇಡುವುದು ಅನೇಕ ಸಂದರ್ಭಗಳಲ್ಲಿ ವ್ಯರ್ಥ ಕಸರತ್ತು. ಹಾಗಾಗಿ, ಸ್ವಯಂ ನಿಯಂತ್ರಣಕ್ಕೆ ಒಳಗಾಗುವಂತೆ ಮಕ್ಕಳನ್ನು ಬೆಳೆಸುವುದಷ್ಟೇ ಸದ್ಯಕ್ಕೆ ಪೋಷಕರಿಗೆ ಉಳಿದಿರುವ ಪರಿಣಾಮಕಾರಿ ದಾರಿ. ಮನೆಗಳಲ್ಲಿ ಮಾತ್ರವಲ್ಲದೆ ಶಾಲೆಗಳಲ್ಲೂ ಮಕ್ಕಳಿಗೆ ನೈತಿಕ ನಿಯಂತ್ರಣವನ್ನು ಪರಿಚಯಿಸುವ ಕೆಲಸ ಪ್ರಜ್ಞಾಪೂರ್ವಕವಾಗಿ ನಡೆಯಬೇಕಾಗಿದೆ.

ಆನ್‌ಲೈನ್ ಜಗತ್ತಿನ ಅಶ್ಲೀಲತೆ ಹಾಗೂ ಹಿಂಸೆಯನ್ನು ಒಳಗೊಂಡಿರುವ ವಿಡಿಯೊಗಳು ಮಾತ್ರವಲ್ಲ; ಕಿರುತೆರೆಯ ಅನೇಕ ಕಾರ್ಯಕ್ರಮಗಳೂ ಮಕ್ಕಳ ಮನಸ್ಸನ್ನು ಹಾನಿಗೊಳಿಸುವ ರೂಪದಲ್ಲಿವೆ. ಹಾಸ್ಯದ ಹೆಸರಿನಲ್ಲಿ ದ್ವಂದ್ವಾರ್ಥದ ಸಂಭಾಷಣೆ ಎಗ್ಗಿಲ್ಲದೆ ಬಳಕೆಯಾಗುತ್ತಿದೆ. ರಿಯಾಲಿಟಿ ಶೋಗಳ ಹೆಸರಿನಲ್ಲಿ ಕಾಮನೆಗಳನ್ನು ಕೆರಳಿಸುವ ಹಾಗೂ ಅನಾರೋಗ್ಯಕರ ಪೈಪೋಟಿಯನ್ನು ಉತ್ತೇಜಿಸುವ ಪ್ರಯತ್ನಗಳು ನಡೆಯುತ್ತಿವೆ. ನಿಧಾನವಿಷದಂತೆ ಪರಿಣಮಿಸುವ ಇಂಥ ಪ್ರಯತ್ನಗಳು ನಿಧಾನವಾಗಿ ಸಮಾಜದ ಸ್ವೀಕೃತಿಯನ್ನೂ ಪಡೆಯುತ್ತಿವೆ. ಇದಕ್ಕೆ ಉದಾಹರಣೆಯಾಗಿ, ಶಾಲಾ ಕಾರ್ಯಕ್ರಮಗಳಲ್ಲಿ ಐಟಂ ಸಾಂಗ್‌ಗಳಿಗೆ ಮಕ್ಕಳನ್ನು ಕುಣಿಸುತ್ತಿರುವ ನಿದರ್ಶನಗಳನ್ನು ಗಮನಿಸಬಹುದು.

ಮಕ್ಕಳ ಮನಸ್ಸಿಗೆ ಹಾನಿಕಾರಕವಾದ ಸಂಗತಿಗಳನ್ನು ಕಾನೂನು ಮೂಲಕ ನಿಯಂತ್ರಿಸುವ ನಿಟ್ಟಿನಲ್ಲಿ ಸರ್ಕಾರ ತನ್ನಿಂದಾದಷ್ಟೂ ಪ್ರಯತ್ನ ನಡೆಸಬೇಕು. ಯಾವುದು ಸರಿ, ಯಾವುದು ತಪ್ಪು ಎಂದು ನಿರ್ಧರಿಸುವ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸುವ ಹೊಣೆಗಾರಿಕೆಯನ್ನು ಪೋಷಕರು ಹಾಗೂ ಶಿಕ್ಷಕರು ನಿರ್ವಹಿಸಬೇಕು.

**■ ರಘುನಾಥ ಚ.ಹ.**